**CFC.R.P.67** ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಪ್ಪಳ

Form No.4(Civil)
(R.P.No.57)

**Spl.C(SC/ST).No.: 2/2020**

ಪಿ.ಡಬ್ಲ್ಯೂ ನಂಃ 3
ಸಿ.ಡಬ್ಲ್ಯೂ ನಂಃ 3
ಸಾಕ್ಷಿಯನ್ನು ದಿನಾಂಕಃ 20-03-2023
ರಂದು ಪ್ರತಿಜ್ಞೆ ಮಾಡಿಸಲಾಯಿತು

| | | |
|---|---|---|
| ಸಾಕ್ಷಿದಾರನ ಹೆಸರು | ಃ | ಸಂಗಪ್ಪ |
| ತಂದೆಯ ಹೆಸರು | ಃ | ಮಾಳಪ್ಪ |
| ವಯಸ್ಸು | ಃ | 28 ವರ್ಷ |
| ಉದ್ಯೋಗ | ಃ | ಕೂಲಿ ಕೆಲಸ |
| ವಾಸ ಸ್ಥಳ | ಃ | ತಿಗರಿ. |

ಸಾಕ್ಷಿಯ ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರವರಿಂದ

ನಾನು ಕೂಲಿ ಕೆಲಸ ಮಾಡುತ್ತೇನೆ. ನಾನು ತಿಗರಿಯ ಕನ್ಯೆ ಹನುಮವ್ವನನ್ನು ಫಕೀರೇಶ್ವರ ಜಾತ್ರೆಯಲ್ಲಿ ಸಾಮೂಹಿಕ ಮದುವೆಯಲ್ಲಿ ಮದುವೆಯಾಗಿದ್ದೆ. ನಮ್ಮ ಮಾವ ಆ ಮದುವೆಯ ಬಗ್ಗೆ ಬರೆಸಿದ್ದರು. ದಿಃ 27-8-2019 ರಂದು ಆರೋಪಿತರು ಬಂದು ನೀವು ಬೇರೆ ಕಡೆ ಮದುವೆ ಮಾಡಿಕೊಂಡು ಊಟಕ್ಕೆ ಇಲ್ಲಿ ಬನ್ನಿ ಎಂದು ಹೇಳಿದರು. ನಮ್ಮ ಹಿರಿಯರು ಮತ್ತು ಆರೋಪಿತರ ನಡುವೆ ಮಾತುಕತೆಯಾಯಿತು. ಅವರ ನಡುವೆ ಏನು ಮಾತು ಆಯಿತು ಎಂದು ಗೊತ್ತಿಲ್ಲ. ಆರೋಪಿತರು ನಮ್ಮ ಹಿರಿಯರಿಗೆ ಏನು ಅಂದರು ಎಂದು ಗೊತ್ತಿಲ್ಲ. ಈ ಬಗ್ಗೆ ಹೇಳಿಕೆ ಕೊಟ್ಟಿಲ್ಲ.

( ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರ ಕೋರಿಕೆಯ ಮೇರೆಗೆ ಸದರಿ ಸಾಕ್ಷಿದಾರನನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಿದೆ.)

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದ

ದಿಃ 27-8-20019 ರಂದು ತಿಗರಿ ಗ್ರಾಮದಲ್ಲಿ ನಡೆದ ಫಕೀರೇಶ್ವರ ಜಾತ್ರೆ ಮಹೋತ್ಸವದಲ್ಲಿ ಸಾಮೂಹಿಕ ವಿವಾಹದಲ್ಲಿ 4 ಪರಿಶಿಷ್ಟ ಜಾತಿಯ ಜೋಡಿಗಳಿಗೆ ಪ್ರತ್ಯೇಕವಾಗಿ ವಿವಾಹ ಮಾಡಿಕೊಡಿ ಎಂದು ಹೇಳಿದ್ದು, ಆ ಬಗ್ಗೆ ಜಗಳ ನಡೆದಿದ್ದು, ಆ ಬಗ್ಗೆ ನಮಗೆ ಸವರ್ಣೀಯರ ಜೊತೆ ಅವಕಾಶ ಮಾಡಿಕೊಡದೇ ಮತ್ತು ನಿಮ್ಮ ಕಾಲೋನಿಯ ಅಂಬೇಡ್ಕರ ಭವನದಲ್ಲಿ ವಿವಾಹ ಮಾಡಿಕೊಳ್ಳಿ ಎಂದು ನಮಗೆ ಅವಮಾನ ಮಾಡಿ ಅಸ್ಪೃಶ್ಯತೆ ಆಚರಣೆ ಮಾಡಿದ್ದರು ಮತ್ತು ಅವಾಚ್ಯವಾಗಿ ಬೈಯ್ದು

**ಪ್ರಾಣ ಬೆದರಿಕೆ ಹಾಕಿದರು ಎಂದರೆ ಸರಿ. ಆರೋಪಿತರು ಅಸ್ಪೃಷ್ಯತೆ ಆಚರಣೆ ಮಾಡಿದ್ದರು ಎಂದರೆ ಸರಿ. ನ್ಯಾಯಾಲಯದ ಮುಂದಿರುವ ಆರೋಪಿತರನ್ನು ಸಾಕ್ಷಿ ಗುರುತಿಸುತ್ತಾರೆ.**

**ಪಾಟೀ ಸವಾಲು : ಆರೋಪಿತರ ಪರ ವಕೀಲರಿಂದ**

**ಕೋರಿಕೆಯ ಮೇರೆಗೆ ಪಾಟೀಸವಾಲನ್ನು ಮುಂದೂಡಲಾಯಿತು.**

**(ನನ್ನ ಹೇಳಿಕೆಯ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಉಕ್ತ ಉಲ್ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**(ಶ್ರೀಮತಿ ಬಿ ಎಸ್ ರೇಖಾ)**
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು**
**ಕೊಪ್ಪಳ**